451

ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮೈಸೂರ್ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 3ನೇ ಅಕ್ಟೋಬರ್ 1896.

ಮೈಸೂರು ಡಿಸ್ಟ್ರಿಕ್ಟ್ ಇದರಡಿ ಕಂಡ ಫಾರೆಸ್ಟ್ಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಆಯಾ ಅಂಜಿಕೆಗಳಿಗೆ ಸ್ಯ 1897ನೇ ಇಸವಿ ಜನವರಿ ತಾರೀಖು 15ರ ವಳಗಾಗಿ ವಣ ನಾಟೂ ಸಾಗಿಸುವದಕ್ಕೆ ಹೊಸ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ.

ತಾಲ್ಲೂಕು.	ಫಾರೆಸ್ಟ್.	ಅಂಜಿ.	ಲಧ್ಯೆ ಮಾಡತಕ್ಕ ಮೊತ್ತ.	ಸರಾಸರಿ ಫಾಸಲೆ.
ಹೆಗ್ಗಡದೇವನಕೋಟೆ.	ಬೇಗೂರು ..	(1) ಗುಂಡ್ರಿ ..	2,000	
		(2) ಬೈರಿಗದ್ದೆ ..	4,000	
		(3) ವನಕೆಗುಂಡಿಮಾಳ ..	2,000	
	ಐನೂರುಮಾರಿಗುಡಿ ..	(1) ಕಲ್ಲುಕೆರೆ ..	4,000	
		(2) ವಾರಂಚಿ ..	2,000	
		(3) ಹಿಂಡುಸ್ತಾಲ್ ಕಟ್ಟೆ. ..	2,000	
	ಕಾಕನಕೋಟೆ ..	(1) ಆನೆಮಾಳ ..	2,000	
		(2) ತ್ಯಾಗದವುರದ ತಿಟ್ಟು ..	2,000	
		ಜುಮ್ಲಾ ..	20,000	

2. ತಮ್ಮಾಂ ದರಖಾಸ್ತುಗಳೂ "ಮೈಸೂರ್ ಡಿಸ್ಟ್ರಿಕ್ಟಿನಲ್ಲಿ ಫಾರೆಸ್ಟುಗಳಿಂದ ಅಂಜಿಕೆಗಳಿಗೆ ಸಾಗಿಸುವದಕ್ಕೆ ಮಾತ್ರವೇ, ದರಖಾಸ್ತು" ಯುಂಬುವದಾಗಿ ಮೇಲ್ವಿಳಾಸ ಬರದು ಮೊಹರುಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಫಾರೆಸ್ಟಿಗೂ 50 ರೂಪಾಯಿ ಬೆಲೆಯುಳ್ಳ ಕರ್ರೆನ್ಸೀನೋಟುಗಳಲಿ, ಯೂ ಪ್ರೊನೋಟುಗಳಲಿ ರವಾನಿಸಬೇಕು. ದರಖಾಸ್ತುಗಳು ಆಜಮಾಯಿಷಿಯಿಂದ ಮೇಲ್ಕಂಡ ಕರ್ರೆನ್ಸೀನೋಟುಗಳನ್ನ ವಾಪಸು ಮಾಡಲ್ಪಡುವವು.

3. ದರಖಾಸ್ತುಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ 1896ನೇ ಇಸವಿ ಆಕ್ಟೋಬರು 31ನೇ ತಾರೀಖು ವರಗೆ ಅಂಗೀಕರಿಸಲ್ಪಡುವವು.

4. ದರಖಾಸ್ತು ಮಾಡಲು ಇಚ್ಛೈವುಳ್ಳ ಕಂಟ್ರಾಕ್ಟುದಾರನು ಮೇಲ್ಕಂಡ ಫಾರೆಸ್ಟುಗಳ ಪೈಕಿ ವೊಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ, ತಯಾರಾದ್ದನ್ನ ಸಾಗಿಸುವದಕ್ಕೆ ಮಾತ್ರ, ದರಖಾಸ್ತು ಮಾಡಿದ ಪಕ್ಷದಲ್ಲಿ ನಾಟುವನ್ನು ಪ್ರತಿ ವೊಂದು ಫಾರೆಸ್ಟಿನಿಂದಲೂ ಅಂಜಿಕೆಗಳಿಗೆ ಸಾಗಿಸುವದಕ್ಕೆ ಮಾತ್ರ, ವೊಪ್ಪಿಕೊಳ್ಳುವ, ಕಮ್ಮಿ ದರವನ್ನು ಬೇರೆ ಬೇರೆಯಾಗಿ ನಮೂದಿಸತಕ್ಕದ್ದು. ಸಲೆ ಅಡಿ 1ಕ್ಕೆ ಇಷ್ಟು ದರವೆಂತ ನಮೂದಿಸಬೇಕು.

5. ಸ್ಯ 1897ನೇ ಇಸವಿ ಜನವರಿ 17ರ ವೊಳಗಾಗಿ ಮೇಲೆ ನಮೂದಿಸಿರುರ ಪೂರಾ ವೊತ್ತವನ್ನು ಆಯಾಯ ಅಂಜಿಕೆಗಳಿಗೆ ಸಾಗಿಸಬೇಕು.

6. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡದುಕೊಳ್ಳುವ ಬಗ್ಗೆ ಜಾಮೀನು ತರಕ್ಕ ಫಾರೆಸ್ಟು 1ಕ್ಕೆ 100 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದು. ಮೇಲ್ಕಂಡ ಷರತ್ತು ಮೀರಿ ನಡಿಯಲು ತಪ್ಪಿದಲ್ಲಿ ತೀರ್ಮಾನ ಮೊಬಲಗನ್ನ ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುವದು.

7. ಬ್ಯಾಸಿಗೆ ಕಾಲದಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಮಾಡಲ್ಪಡುವ ಕಾಯಿದೆ ಕಾನೂಗಳಂತೆ ನಡಿಯಲು ಕಂಟ್ರಾಕ್ಟುದಾರನು ಬದ್ಧನಾಗಿರುವನು.

8. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಕಮ್ಮಿದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥಾ ಅಂಗೀಕಾರವು ಫಾರೆಸ್ಟು ಕ್ವರ್ಸರ್ವೇಟರ್ ಸಾಹೆಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

9. ಸಾವಾನುಗಳು ಸಾಗಿಸುವದಕ್ಕೆ ಗಾಡಿ, ರಸ್ತೆ ವಗೈರೆ ದಾರಿಗಳನ್ನು ಮಾಡಿಕೊಡಲು ಸರ್ಕಾರದವರು ಬದ್ಧರಾಗಿಲ್ಲವಾದ ಸಬಬು ವುದ್ದೇಶಿಸುವ ಕಂಟ್ರಾಕ್ಟುದಾರನೇ ಆತನ ಹಾತಲಾಗವಡಿನಿಂದ ತಕ್ಕ ಯೇರ್ಪಾಡುಗಳು ಮಾಡಿಕೊಳ್ಳತಕ್ಕದ್ದು. ಮರಗಳನ್ನು ಸಾಗಿಸದೆ, ಇರುದಪಕ್ಷ ಯಾವ ಸಬಬುಗಳನ್ನೂ ಅಂಗೀಕರಿಸಲಾರೆವು.

10. ವುದ್ದೇಶಿಸುವ ಕಂಟ್ರಾಕ್ಟುದಾರರು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸಿನಲ್ಲಿ ವಿಚಾರಿಸಿ ತೆಗದುಕೊಳ್ಳಬಹುದು.

ಎಂ. ಜೆ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ.